ಇ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಪರಿಶೀಲನೆಯಲ್ಲಿ ಇಲ್ಲ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ ನಂ. ೧೨೪ (೨೯೮)

ಶ್ರೀ ಬಿ. ಎ. ಇದಿನಬ್ಬ.—ಇದುವರೆವಿಗೆ ೧೪ ಅರ್ಜಿಗಳು ಬಂದಿವೆ ಎಂಬುದಾಗಿ ಹೇಳಿದ್ದೀರಿ. ಹೇಗೂ ವರ್ಷ ಮುಗಿಯುತ್ತಾ ಬಂದಿದೆ, ಆದ್ದರಿಂದ ಈ ಸದನ ಮುಂಗಿಯುವುದರೊಳಗಾಗಿ ಆ ೧೪ ಜನರಿಗೂ ಸಹಾಯಧನವನ್ನು ಕೊಟ್ಟು ಮುಗಿಸುತ್ತೀರಾ ?

ಶ್ರೀ ಜಿ. ಆರ್. ಯಾವಗಲ್.—ಇದುವರೆವಿಗೆ ನಮಗೆ ೪ ಅರ್ಜಿಗಳು ಬಂದಿವೆ.....

ಶ್ರೀ ಬಿ. ತಿ. ಇದಿನಬ್ಬ.—ಹಿಂದೆ ವಕ್ಫ್ ಮಂತ್ರಿಗಳು ಒಂದೊಂದು ಕ್ಷೇತ್ರದ ಶಾಸಕರಿಂದ ೨–೨ ಅರ್ಜಿಗಳನ್ನು ಕಳುಹಿಸಬೇಕೆಂದು ಪತ್ರ ಬರೆದಿದ್ದಾರೆ. ಅದರಂತೆ ಎಲ್ಲ ಶಾಸಕರು ೨–೨ ಅರ್ಜಿಗಳನ್ನು ಕಳುಹಿಸುವುದಾದರೆ, ಅವರಿಗೆ ಬರುವಂತಹ ಹಣ ಬಹಳ ಕಡಿಮೆಯಾಗುತ್ತದೆ, ಆದ್ದರಿಂದ ಕೇವಲ ೭–೮ ಜನಗಳಿಗೆ ಮಾತ್ರ ಎಂಬುದಾಗಿ ರಿಸ್ಟ್ರಿಕ್ಷನ್ ಮಾಡಿ. ಸಹಾಯಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಹಿಂದೆ ಎಲ್ಲಾ ಶಾಸಕರುಗಳು ಅವರವರ ಕ್ಷೇತ್ರದಿಂದ ವಕ್ಫ್ ಕೆಲಸಗಳನ್ನು ಮಾಡುವ ಮುಂಚೆ ಅವರಿಂದ ಅಭಿಪ್ರಾಯ ಪಡೆದು ಮಾಡುತ್ತಿದ್ದರು, ಅದನ್ನೇ ಅನುಸರಿಸಿ ಎಲ್ಲ ಶಾಸಕರು ಅವರವರ ಕ್ಷೇತ್ರಗಳಲ್ಲಿ ಆಗಬೇಕಾಗಿರುವ ವಕ್ಫ್ ಕೆಲಸಗಳ ಬಗ್ಗೆ ೨–೨ ಅರ್ಜಿಗಳನ್ನು ಕಳುಹಿಸಿಕೊಡಿ ಎಂಬುದಾಗಿ ಪತ್ರ ಬರೆದಿದ್ದೇನೆ. ನಮ್ಮಲ್ಲಿರುವಂತಹ ಹಣ ೫೦ ಲಕ್ಷ ರೂಪಾಯಿಗಳು. ಆದ್ದರಿಂದ ನಮ್ಮ ರಾಜ್ಯದಲ್ಲಿರುವಂತಹ ೨೨೪ ಕ್ಷೇತ್ರಗಳಲ್ಲಿ ಇರುವಂತಹ ಶಾಸಕರು ೨–೨ ಅರ್ಜಿಗಳನ್ನು ಕಳುಹಿಸಿಕೊಡಬೇಕು. ಅದರಂತೆ ಹಣವನ್ನು ಬಿಡುಗಡೆ ಮಾಡಲಾಗುವುದು. ಇನ್ನೂ ಹೆಚ್ಚು ಹಣ ಬಂದರೆ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಅವರಿಗೆ ಬಿಡುಗಡೆ ಮಾಡಲಾಗುವುದು.

ಅಲ್ಪಕಾಲಾವಧಿ ಪ್ರಶ್ನೆ ನಂ. ೩ (೧೦)

ಶ್ರೀಮಲ್ಲಿಕಾರ್ಜುನ್ ಎಂ. ಖರ್ಗೆ.—ಇವರ ಉತ್ತರವನ್ನು ನೋಡಿದರೆ ನನಗೆ ಸ್ವಲ್ಪ ಅನುಮಾನ ಆಲ್ಲ. ನಗು ಬರುತ್ತಿದೆ. ಏಕೆಂದರೆ ಅವರಿಗೆ ಇದರಿಂದ ಎಸ್.ಸಿ. ಜನರ ಬಗ್ಗೆ ಎಷ್ಟು ಆಸಕ್ತಿ ಇದೆ ಎನ್ನುವುದಕ್ಕಿಂತಹದ್ದನ್ನು ತೋರಿಸುತ್ತದೆ. ಈಗಾಗಲೇ ಎಸ್.ಸಿ./ಎಸ್.ಟಿ. ಪಟ್ಟಿಯ ಬಗ್ಗೆ ವಾದ ವಿವಾದ ನಡೆಯುತ್ತಿದೆ ಎನ್ನುವುದಕ್ಕಿಂತಹ ವಿಚಾರ ಕೂಡ ಅವರಿಗೆ ಗೊತ್ತಿದೆ. ೭೧ನೇ ಸಾಲಿನ ಜನಗಣತಿಯ ಆಧಾರದ ಮೇಲೆ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಕ್ಷೇತ್ರಗಳನ್ನು ವಿಂಗಡಣೆ ಮಾಡಬೇಕೆಂದು ಆದೇಶ ನೀಡಿದ್ದಾರೆ. ಇದರಿಂದ ಎಸ್.ಸಿ. / ಎಸ್. ಟಿ. ಜನಾಂಗದವರಿಗೆ ದೊಡ್ಡ ಅನಾಹುತವನ್ನು ಈ ಸರ್ಕಾರ ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಕಾರಣ ಏನೆಂದರೆ, ೧೯೭೬ ರಲ್ಲಿ ಎಸ್.ಸಿ./ಎಸ್.ಟಿ. ಜಾತಿಯವರಿಗೆ ಇದ್ದಂತಹ ಏರಿಯಾ ರಿಸ್ಟ್ರಿಕ್ಷನನ್ನು ತೆಗೆದುಬಿಟ್ಟು, ಆ ಬಗ್ಗೆ ಸರ್ಕಾರಿ ಆರ್ಡ್ಲೊಂದನ್ನು ಮಾಡಿ, ನಂತರ ಕಾನೂನನ್ನು ಮಾಡಿ, ಕೆಲವು ಜಾತಿಗಳನ್ನು ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಎಸ್.ಸಿ ಪಟ್ಟಿಗೆ ಸೇರಿಸಿದ್ದಾರೆ. ಆ ರೀತಿ ಸೇರಿಸಿದ ಮೇಲೆ ೧೯೮೧ ರಲ್ಲಿ ಜನಗಣತಿಯನ್ನು ಮಾಡುವಾಗ ಅವರೆಲ್ಲರೂ ಎಸ್.ಸಿ. ಪಟ್ಟಿಯಲ್ಲಿ ಸೇರಿಬಿಟ್ಟರು ಆದರೆ, ಇವರು ೧೯೭೧ರ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಕ್ಷೇತ್ರಗಳ ಪುನರ್ವಿಂಗಡಣೆ ಮಾಡುವುದಾದರೆ, ಆ ಜನರಿಗೆ ಪ್ರಾತಿನಿಧ್ಯವನ್ನು ಕೊಡುವುದರಲ್ಲಿ ಕಡಿಮೆ ಮಾಡುವುದಕ್ಕೆ ನಡೆಸಿರುವ ಪಂತಹ ಕುತಂತ್ರ ಇದು. ಆದಕ್ಕಾಗಿಯೇ ಇವರು ೧೯೭೧ನೇ ಜನಗಣತಿಯನ್ನು ಆಧಾರವಾಗಿಟ್ಟುಕೊಂಡು ಕ್ಷೇತ್ರಗಳ ಪುನರ್ವಿಂಗಡನೆ ಮಾಡಬೇಕೆಂದು ಆದೇಶವನ್ನು ನೀಡಿದ್ದಾರೆಂದು ನಾನು ಇವರ ಮೇಲೆ ನೇರವಾಗಿ ಆಪಾದನೆ ಮಾಡಬೇಕಾಗುತ್ತದೆ. ಇಲ್ಲ ಅವರ ಬಗ್ಗೆ ಕಳಕಳಿ ಇದ್ದರೆ ೧೯೭೧ ರಲ್ಲಿ ಜನಗಣತಿ ಮಾಡುವಾಗ ಯಾವ ಯಾವ ಜಾತಿಗಳು ಎಸ್.ಸಿ. ಪಟ್ಟಿಯಲ್ಲಿದ್ದವು ಅದನ್ನ್ನು ಸೀಮಿತ ಮಾಡಿ ಚುನಾವಣೆಯನ್ನು ಮಾಡಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲದಿದ್ದರೆ ಇದನ್ನು ಸರಿಪಡಿಸುವುದಕ್ಕೆ ಯಾವ ರೀತಿಯ ವ್ಯವಸ್ಥೆಯನ್ನು ಮಾಡುತ್ತೀರಿ ? ಮೊದಲನೆಯದಾಗಿ ನಾವು ಜಿಲ್ಲಾ